ಒಟ್ಟು ಪರಿಹಾರ

(ರೂ. ಲಕ್ಷಗಳಲ್ಲಿ)

2012–13	2013–14	2014–15
73.65	53.26	85.19

ಲಿಂಕ್ ಕೆನಾಲ್ ನಿರ್ಮಾಣ

946(966); ಡಾ॥ ಶಿವರಾಜ್ ಪಾಟೀಲ್ ಎಸ್. (ರಾಯಚೂರು ನಗರ)

ಅ) ರಾಯಚೂರು ನಗರ ಮತ್ತು ಜಿಲ್ಲೆಯ ಜನತೆಗೆ ಕುಡಿಯುವ ನೀರಿನ ಅಭಾವವಿರುವುದರಿಂದ ಲಿಂಕ್ ಕೆನಾಲ್ ನಿರ್ಮಾಣ ಮಾಡುವ ಕುರಿತು ಬೇಡಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ಈ ಜಿಲ್ಲೆಯ ಹಿತದೃಷ್ಟಿಯಿಂದ ಲಿಂಕ್ ಕೆನಾಲ್ ನಿರ್ಮಾಣ ಪ್ರಸ್ತಾವನೆಯನ್ನು ಅನುಮೋದಿಸಿ ಕಾಮಗಾರಿ ಪ್ರಾರಂಭಿಸಲು ಸರ್ಕಾರಕ್ಕಿರುವ ಅಡೆ–ತಡೆಗಳೇನು: ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ವಿವರ ನೀಡುವುದು);

ಇ) ಲಿಂಕ್ ಕೆನಾಲ್ ನಿರ್ಮಾಣ ಪ್ರಸ್ತಾವನೆಯನ್ನು ಅನುಮೋದಿಸಿ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು (ಸಂಪೂರ್ಣ ವಿವರ ನೀಡುವುದು)?

ಶ್ರೀ M.B. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಬಂದಿರುತ್ತದೆ

ಆ) ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರಡಿಯಲ್ಲಿ ಬರುವ ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಉಪ ಯೋಜನೆಯಡಿ ರಾಯಚೂರು ಜಿಲ್ಲೆ ದೇವದುರ್ಗ ಹಾಗೂ ರಾಯಚೂರು ತಾಲ್ಲೂಕುಗಳ ಸುಮಾರು 56,100 ಹೆಕ್ಟೇರ್ ಕ್ಷೇತ್ರಕ್ಕೆ

18.982 ಟಿಎಂಸಿ ನೀರನ್ನು ಬಳಸಿ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿರುತ್ತದೆ. ಸದರಿ ಉಪ ಯೋಜನೆಯಡಿಯ ಕಿ.ಮೀ. 95.00 ರಿಂದ 145.00ರವರೆಗಿನ ಮುಖ್ಯ ಕಾಲುವೆ ಕಾಮಗಾರಿಯು ಪ್ರಗತಿಯಲ್ಲಿರುತ್ತವೆ.

ಗಣೇಕಲ್ ಬ್ಯಾಲೆನ್ಸಿಂಗ್ ರಿಸರ್ವಾಯರನ್ನು ತುಂಗಭದ್ರ ಎಡದಂಡೆ ಕಾಲುವೆಯ ಟೇಲ್ ಎಂಡ್ ಅಚ್ಚುಕಟ್ಟು ಕ್ಷೇತ್ರಕ್ಕೆ ಹಾಗೂ ರಾಯಚೂರು ನಗರಕ್ಕೆ ಕುಡಿಯುವ ನೀರು ಒದಗಿಸಲು ನಿರ್ಮಿಸಲಾಗಿದ್ದು, ಇದು ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಕಿ.ಮೀ. 108.90 ರಿಂದ 113.40ರ ರೀಚ್‌ನ ಬಲಭಾಗದಲ್ಲಿ ಇದ್ದು, ಗಣೇಕಲ್ ಬ್ಯಾಲೆನ್ಸಿಂಗ್ ರಿಸರ್ವಾಯರ್‌ಗೆ ನಾರಾಯಣಪುರ ಬಲದಂಡೆ ಕಾಲುವೆಯಿಂದ ಲಿಂಕ್ ಕೆನಾಲ್ ನಿರ್ಮಿಸಿ ನೀರು ಹರಿಸುವ ಕುರಿತು ಇದ್ದ ಪ್ರಸ್ತಾವನೆ ಬಗೆಗಿನ ತಾಂತ್ರಿಕ ಸಾಧ್ಯಾಸಾಧ್ಯತೆ ಕುರಿತು ನಿಗಮದ ತಾಂತ್ರಿಕ ಉಪ ಸಮಿತಿಯಲ್ಲಿ ಪರಿಶೀಲಿಸಲಾಗಿದ್ದು, ನಾರಾಯಣಪುರ ಬಲದಂಡೆ ಕಾಲುವೆಯ ಕಿ.ಮೀ. 108.90ರಲ್ಲಿ ಕಾಲುವೆ ಬೆಡ್ ಲೆವೆಲ್ ಆರ್‌ಎಲ್: 411.23ಮೀ. ಆಗಿದ್ದು ಗಣೇಕಲ್ ರಿಸರ್ವಾಯರ್ ಎಫ್‌ಟಿಎಲ್ ಮಟ್ಟ ಆರ್‌ಎಲ್:416.00ಮೀ. ಆಗಿದ್ದು ನೀರು ಒದಗಿಸಲು ತಾಂತ್ರಿಕವಾಗಿ ಕಾರ್ಯಸಾಧುವಲ್ಲ ಎಂಬುದಾಗಿ ಅಭಿಪ್ರಾಯ ಪಡಲಾಗಿರುತ್ತದೆ.

ಮುಂದುವರೆದು, ರಾಯಚೂರು ನಗರ ಕುಡಿಯುವ ನೀರು ಪೂರೈಕೆಗೆ ಸಂಬಂಧಿಸಿದಂತೆ 29 ಕ್ಯೂಸೆಕ್ಸ್ ಪ್ರಮಾಣದ ನೀರನ್ನು ಆರು ತಿಂಗಳ ಅವಧಿಗೆ ಪೂರೈಸಬೇಕಾಗಿರುವ ಅವಶ್ಯಕತೆ ಇರುವುದಾಗಿ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗದವರು ಕೋರಿರುತ್ತಾರೆ. ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆ ಕಿ.ಮೀ.140.226 ರಿಂದ ಸುಮಾರು 1.30ಕಿ.ಮೀ. ಅಂತರದಲ್ಲಿ ರಾಂಪುರ ಬಳಿಯ Impounding Reservoir ಗೆ ರಾಯಚೂರು ನಗರ ಕುಡಿಯುವ ನೀರಿನ ಪೂರೈಕೆಗೆ ಅನುಕೂಲವಾಗಲು ನಾರಾಯಣಪುರ

ಬಲದಂಡೆ ಕಾಲುವೆ ಕಿ.ಮೀ. 140.226ರಲ್ಲಿ ಸೂಕ್ತ ಔಟ್‌ಲೆಟ್ ಮುಖಾಂತರ ನೀರಿನ ಪೂರೈಕೆ ಕುರಿತ ಪ್ರಸ್ತಾವನೆ ನಿಗಮದ ಅಂದಾಜು ಪರಿಶೀಲನಾ ಸಮಿತಿ ಸಭೆಯಲ್ಲಿ ಪರಿಶೀಲಿಸಲಾಗಿದ್ದು, ನಿಗಮದ ಮಂಡಳಿಯ ಅನುಮೋದನೆ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ.140.226ರಲ್ಲಿ ಪ್ರಸ್ತಾಪಿತ ಔಟ್‌ಲೆಟ್‌ನಿಂದ ರಾಂಪುರ Impounding Reservoir ಗೆ ಲಿಂಕ್ ಕೆನಾಲ್ ನಿರ್ಮಿಸುವ ಕಾಮಗಾರಿಯು ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ರಸ್ತೆ ಬದಿಯಲ್ಲಿ ನೆಡುತೋಪು ಯೋಜನೆ

947(1961); ಡಾ॥ ಶಿವರಾಜ್ ಪಾಟೀಲ್ ಎಸ್. (ರಾಯಚೂರು ನಗರ)

ಅ) 2013–14 ಮತ್ತು 2014–15ನೇ ಸಾಲಿನಲ್ಲಿ ರಸ್ತೆ ಬದಿಯಲ್ಲಿ ನೆಡುತೋಪು ಯೋಜನೆಗೆ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)

ಆ) ರಾಯಚೂರು ಜಿಲ್ಲೆಗೆ 2013–14 ಹಾಗೂ 2014–15ನೇ ಸಾಲಿನಲ್ಲಿ ರಸ್ತೆ ಬದಿಯಲ್ಲಿ ನೆಡುತೋಪು ಯೋಜನೆಗಳಿಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು?

ಇ) ಈ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ನೆಡುತೋಪುಗಳನ್ನು ನೆಡಲಾಗಿದೆ., ಈ ಕಾರ್ಯಕ್ರಮಗಳಲ್ಲಿ ನೆಡಲಾಗಿರುವ ಸಸಿಗಳ ಸಂಖ್ಯೆ ಎಷ್ಟು (ಸಂಪೂರ್ಣ ವಿವರ ನೀಡುವುದು.